ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿ. ದಿನಾಂಕ 31.12.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ

ವೇತನ ಪ್ರಮಾಣ ಪತ್ರವನ್ನು ನಿಪಿ-13 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎನ್.ಕೆ ವಕೀಲರಿಂದಃ

ಅಪಘಾತದ ಕುರಿತು ನನಗೆ ಮೋಹನ್ ರವರು ಹೇಳಿದ್ದರ ಮೇರೆಗೆ ಗೊತ್ತಾಗಿರುತ್ತದೆ. ಮೋಹನ್ ರವರು ನನಗೆ ಸಂಬಂಧಿಕರು ಎಂದರೆ ಸರಿ. ನಮ್ಮ ಮತ್ತು ಮೋಹನ್ ರವರ ನಡುವೆ ಸಾಕಷ್ಟು ಒಡನಾಟ ಇದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ಗಂಡ ಮೃತ ಬೋಜಪ್ಪರವರು ಸಹ 2ನೇ ಆರೋಪಿ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ ವಾಹನ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿ. ನಮಗೆ 1.00 ಎಕ್ರೆ ತೋಟ ಇರುತ್ತದೆ ಎಂದರೆ ಸರಿ. ಅದರಲ್ಲಿ ಸ್ವಲ್ಪ ಅಡಿಕೆ ಇರುತ್ತದೆ. ನನ್ನ ಮಗ ಬಿ.ಕಾಂ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನನ್ನ ಗಂಡನಿಗೆ ಯಾವುದೇ ಆರೋಗ್ಯ ಸಮಸ್ಯೆ ಇರಲಿಲ್ಲ. ನನ್ನ ಗಂಡ ರೂ.51,300/- ಸಂಬಳ ಪಡೆಯುತ್ತಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿರುವುದಿಲ್ಲ. ನಾನು 9ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಗಂಡನ ತಪ್ಪಿನಿಂದಲೇ ಅಪಘಾತವಾಗಿರುವ ಕಾರಣದಿಂದ ನನ್ನ ಗಂಡನನ್ನು 2ನೇ ಆರೋಪಿಯನ್ನಾಗಿ ಪೊಲೀಸರು ಪರಿಗಣಿಸಿರುವ ಕಾರಣದಿಂದ ನಾನು ಈ ಪ್ರಕರಣದಲ್ಲಿ ಪರಿಹಾರ ಪಡೆಯಲು ಹಕ್ಕುದಾರಳಲ್ಲ ಎಂದರೆ ಸರಿಯಲ್ಲ. ನನ್ನ ಜೀವನೋಪಾಯಕ್ಕಾಗಿ ನಮಗೆ ಅಡಿಕೆ ತೋಟ ಇರುವ ಕಾರಣಕ್ಕೆ ನಾವು ನನ್ನ ಗಂಡನ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಈ ಅರ್ಜಿಯಲ್ಲಿ ಕೇಳಿರುವ

ಪರಿಹಾರವನ್ನು ಪಡೆಯಲು ನಾವು ಹಕ್ಕುದಾರರಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಮರಣದ ಬಾಬ್ತು ನನ್ನ ಮಗನಿಗೆ ಉದ್ಯೋಗ ಕೊಡಬೇಕು ಎಂದು ಕೇಳಿದ್ದೇನೆ. ನಾನು ಉದ್ಯೋಗಕ್ಕಾಗಿ ಸೊಸೈಟಿಗೆ ನೀಡಿದ ಅರ್ಜಿ ಪರಿಗಣನೆಗೆ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಸಂಬಳ ಪಡೆಯುತ್ತಿದ್ದ ಬಗ್ಗೆ ಸೊಸೈಟಿಯಿಂದ ಯಾರು ಪ್ರಮಾಣ ಪತ್ರ ಪಡೆದುಕೊಂಡಿದ್ದಾರೆ ನನಗೆ ಗೊತ್ತಿಲ್ಲ. ಹೆಚ್ಚಿನ ವಿಮಾ ಪರಿಹಾರ ಪಡೆಯುವ ಸಲುವಾಗಿ ನಿಪಿ–13 ರಂತೆ ಸುಳ್ಳು ಪ್ರಮಾಣ ಪತ್ರ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ–13 ನನ್ನ ಗಂಡನ ವಾಸ್ತವ ವೇತನದ ಪ್ರಮಾಣ ಪತ್ರ ಅಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ನನ್ನ ಗಂಡನಿಗೆ ತಿಂಗಳಿಗೆ ರೂ.51,000/– ಆದಾಯ ಇರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ